**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017 ಅ.ಸಾ.3**

**ಚಾ.ಸಾ.7**

| | | |
|---|---|---|
| ಸಾಕ್ಷಿದಾರರ ಹೆಸರು | - | ಸತೀಶ ನಾಯಕ್ |
| ತಂದೆಯ ಹೆಸರು | - | ಅನಂತ ನಾಯಕ್ |
| ವಯಸ್ಸು | - | 53 ವರ್ಷ |
| ಉದ್ಯೋಗ | - | ಸೆಕ್ಯುರಿಟಿ |
| ವಿಳಾಸ | - | ಸಣ್ಣಕ್ಕಿಬೆಟ್ಟು, ಪರ್ಕಳ,ಉಡುಪಿ ತಾಲೂಕು |

ದಿನಾಂಕಃ 15-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ಮೃತ ಸಂತೋಷ ನಾಯಕ್ ನನ್ನ ತಮ್ಮ. ಚಾಸಾ1 ಮೃತ ಸಂತೋಷನ ಹೆಂಡತಿ. ಚಾಸಾ3 ನನ್ನ ತಾಯಿ. ಚಾಸಾ5 ಮತ್ತು 6 ಮೃತ ಸಂತೋಷನ ಮಕ್ಕಳು.

2. ಸಂತೋಷ ನಾಯಕ್ ಮತ್ತು ಆತನ ಪತ್ನಿ ಸುಮಿತ್ರ 2017 ನೇ ಇಸವಿಯಲ್ಲಿ ಕೊಂಡಾಡಿ ಎಂಬಲ್ಲಿರುವ ಅವರ ಮನೆಯಲ್ಲಿ ವಾಸ ಮಾಡುತ್ತಿದ್ದರು. ಈ ಪ್ರಕರಣದ 4 ರಿಂದ 6 ನೇ ಆರೋಪಿತರ ಪರಿಚಯ ಇಲ್ಲ. ಮೃತ 1 ಮತ್ತು 7 ನೇ ಆರೋಪಿತರ ಪರಿಚಯ ಇಲ್ಲ. ಸಂತೋಷ ನಾಯಕ್ ಕೊಲೆಯಾಗಿ ಮೃತ ಪಟ್ಟಿರುತ್ತಾನೆ. ಈ ಬಗ್ಗೆ ಹಿರಿಯಡ್ಕ ಪೋಲಿಸ್ ಠಾಣೆಗೆ ಚಾಸಾ1 ಇವರು ದೂರು ನೀಡಿರುತ್ತಾರೆ. ಆರೋಪಿ 4 ರಿಂದ 6 ಮತ್ತು ಮೃತ ಸಂತೋಷನ ಮಧ್ಯೆ ಇದ್ದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಈ ಬಗ್ಗೆ ಒಂದನೇ ಆರೋಪಿತನು ಸಂತೋಷನಿಗೆ ಬೆದರಿಕೆ ಹಾಕಿದ ವಿಚಾರ ಗೊತ್ತಿಲ್ಲ. ಆರೋಪಿತರು ನಮ್ಮ ಮನೆಯವರಿಗೆ ಪಿಸ್ತೂಲು ತೋರಿಸಿ ಬೆದರಿಕೆ ಹಾಕಿದ್ದ ವಿಚಾರ ಗೊತ್ತಿಲ್ಲ. ಮೃತ ಸಂತೋಷನ ಶವ ಮಹಜರು ಕಾಲದಲ್ಲಿ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ಕೊಟ್ಟಿರುವುದಿಲ್ಲ. ಪೋಲಿಸರು ನನ್ನ ತಮ್ಮನ ಕೊಲೆ ಪ್ರಕರಣದಲ್ಲಿ ನನ್ನನ್ನು ಕರೆಸಿ ದಾಖಲೆಗಳಲ್ಲಿ ಸಹಿ

ಪಡೆದುಕೊಂಡಿದ್ದಾರೆ. ಈಗ ತೋರಿಸಿದ ದಿನಾಂಕ 06-01-2017 ರ ಮಹಜರಿನಲ್ಲಿ ನನ್ನ ಸಹಿ ಇದೆ. ಆ ಮಹಜರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಛಾಯಾ ಚಿತ್ರವನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಅದೇ ದಿನ ಇನ್ನೊಂದು ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ. ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಛಾಯಾ ಚಿತ್ರವನ್ನು ಈಗಾಗಲೇ ನಿಪಿ-4 ಮತ್ತು 5 ಎಂದು ಗುರುತಿಸಲಾಗಿದೆ. ಅದೇ ದಿನ ತಯಾರಿಸಿದ ಇನ್ನೊಂದು ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ. ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಛಾಯಾ ಚಿತ್ರವನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದೆ. ಅವುಗಳಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ ಹಾಗೂ ಸ್ಥಳ ಪರಿಶೀಲಿಸಿ ಯಾವುದೇ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈಗ ತೋರಿಸಿದ ಸೊತ್ತು ಸ್ವಾಧೀನತಾ ಮಹಜರಿನಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪೋಲಿಸರು ಯಾವುದೇ ಸ್ಥಳ ಪರಿಶೀಲಿಸಿರುವುದಿಲ್ಲ ಮತ್ತು 2 ನೇ ಆರೋಪಿಯ ಹೇಳಿಕೆಯ ಮೇರೆಗೆ ಸೊತ್ತು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಈಗ ತೋರಿಸಿದ ಭಾವ ಚಿತ್ರದಲ್ಲಿ ನನ್ನ ಇರುವಿಕೆ ಇದ್ದು ಅವುಗಳನ್ನು ನಿಪಿ-14 ಮತ್ತು 15 ಎಂದು ಗುರುತಿಸಲಾಯಿತು. ಅವುಗಳನ್ನು ಎಲ್ಲಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ**

1. ದಿನಾಂಕ 11-01-2017 ರಂದು ಮೃತ ಸಂತೋಷ ಈತನ ಶವ ಪಂಚನಾಮೆಯ ಕಾಲದಲ್ಲಿ ನಾನು ಹಾಜರಿದ್ದು ಪೋಲಿಸರು ನನ್ನನ್ನು ವಿಚಾರಿಸಿದ್ದು ಪೋಲಿಸರ ಸಮಕ್ಷಮ ಶವ ಪಂಚನಾಮೆ ಕಾಲದಲ್ಲಿ ದಿನಾಂಕ 02-12-2016 ರಂದು ಮೃತನು ತನ್ನ ಹೆಂಡತಿ ಮಕ್ಕಳನ್ನು ಮಣಿಪಾಲದಲ್ಲಿ ಬಿಟ್ಟು ಹೋದವನು ಪತ್ತೆಯಾಗದೇ ಇದ್ದು ನಂತರ ಅದೇ ದಿನ ರಾತ್ರಿ ನಮ್ಮ ಕುಟುಂಬದವರು ಮನೆಯಲ್ಲಿದ್ದಾಗ ನಾಲ್ಕು ಜನ ವ್ಯಕ್ತಿಗಳು ನಮ್ಮ ಮನೆಗೆ ಬಂದು ಅವರನ್ನು

ಬೆದರಿಸಿ ಕಾರಿನಲ್ಲಿ ಅಪಹರಿಸಿಕೊಂಡು ಹೋಗಿ ಚಾಸಾ1 ಮತ್ತು 4 ರವರ ಮೈಮೇಲಿದ್ದ ಚಿನ್ನಾಭರಣಗಳನ್ನು ದೋಚಿಕೊಂಡು ಹೋಗಿರುವ ಬಗ್ಗೆ ತಿಳಿಸಿದ್ದು ನಂತರ 2 ನೇ ಆರೋಪಿಯನ್ನು ಪೋಲಿಸರು ದಸ್ತಗಿರಿ ಮಾಡಿದ್ದು ಆ ಸಮಯ 2 ನೇ ಆರೋಪಿ ಇತರೆ ಆರೋಪಿತರೊಂದಿಗೆ ಸೇರಿ ಸಂತೋಷನನ್ನು ಕೊಲೆ ಮಾಡಿರುವ ಬಗ್ಗೆ ತಿಳಿಯಿತು ಎಂದು ಈಗ ಓದಿ ಹೇಳಿದಂತೆ ನಿಪಿ-13 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ದಿನಾಂಕ 06-01-2017 ರಂದು 1 ನೇ ಆರೋಪಿ ಪಿರ್ಯಾದಿ ಮತ್ತು ಇತರರನ್ನು ಬಲವಂತವಾಗಿ ಕರೆದುಕೊಂಡು ಬಂದ ಸ್ಥಳಕ್ಕೆ ಪೋಲಿಸರು ಬಂದಾಗ ಚಾಸಾ2 ಹಾಜರಿದ್ದು ಆ ಮನೆ ಯನ್ನು ತೋರಿಸಿಕೊಟ್ಟಿದ್ದು ಸದ್ರಿ ಮನೆ ಪೆರ್ಣಂಕಿಲ ಗ್ರಾಮದ ವರ್ವಾಡಿ ಎಂಬಲ್ಲಿ ಇದ್ದು ಮನೆ ಶಂಕರ ಕುಲಾಲ ಎಂಬವರಿಗೆ ಸೇರಿದ್ದು ಆ ಮನೆಯನ್ನು ಪೋಲಿಸರು ನಮ್ಮ ಸಮಕ್ಷಮ ಪರಿಶೀಲಿಸಿ ನಿಪಿ 1 ರಂತೆ ಮಹಜರು ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯ ನಿಪಿ 2 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಪೋಲಿಸರು ಉಡುಪಿ ತಾಲೂಕು ಪೆರ್ಣಂಕಿಲ ಗ್ರಾಮದ ರತ್ನಶ್ರೀ ನಿಲಯ ಎನ್ನುವ ಮನೆಗೆ ಬಂದಿದ್ದು ಆ ಸಮ ಯ ಚಾಸಾ2 ಹಾಜರಿದ್ದು ಪೋಲಿಸರಿಗೆ ಆರೋಪಿತರು ನಮ್ಮ ಕುಟುಂಬದವರನ್ನು ಬಲವಂತವಾಗಿ ಕರೆದುಕೊಂಡು ಹೋದ ಸ್ಥಳವನ್ನು ತೋರಿಸಿಕೊಟ್ಟಿದ್ದು ಆ ಮನೆ ನಮಗೆ ಸಂಬಂಧಿಸಿದ್ದಾಗಿದ್ದು ಆ ಸ್ಥಳವನ್ನು ಪರಿಶೀಲಿಸಿ ನಮ್ಮ ಸಮಕ್ಷಮ ನಿಪಿ-3 ರಂತೆ ಮಹಜರು ಬರೆದು ನನ್ನ ಸಹಿ ಪಡೆದು ನಿಪಿ-4 ಮತ್ತು 5 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

3. ಅದೇ ದಿನ ಪೋಲಿಸರು ಪೆರ್ಣಂಕಿಲ ಗ್ರಾಮದ ಪಡುಬೆಟ್ಟುವಿನ ಪುಷ್ಪಾ ನಿಲಯಕ್ಕೆ ಬಂದಿದ್ದು ಆ ಸಮಯ ನಾನು ಹಾಜರಿದ್ದು ಇದೇ ಮನೆಯಲ್ಲಿ ಆರೋಪಿತರು ನಮ್ಮ ಕುಟುಂಬ ದವರನ್ನು ಬೆದರಿಸಿ ಅವರ ಚಿನ್ನಾಭರಣಗಳನ್ನು ಬಲವಂತವಾಗಿ ತೆಗೆದುಕೊಂಡು ಹೋದ ಸ್ಥಳ ಎಂದು ತೋರಿಸಿ ಕೊಟ್ಟಿದ್ದು ಆ ಸಮಯ ಪೋಲಿಸರು ನಮ್ಮ ಸಮಕ್ಷಮ ನಿಪಿ-6 ರಂತೆ ಮಹಜರು ಬರೆದು ನಿಪಿ-7 ರಂತೆ ಛಾಯಾ ಚಿತ್ರ ತೆಗೆದಿದ್ದಾರೆ ಎಂದರೆ ಸರಿಯಲ್ಲ.

4. ದಿನಾಂಕ 12-01-2017 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದು ಆ ಸಮಯ 2 ನೇ ಆರೋಪಿ ಠಾಣೆಯಲ್ಲಿ ಹಾಜರಿದ್ದು ಆತ ಪೋಲಿಸರ ವಶದಲ್ಲಿದ್ದು ಹೇಳಿಕೆ ನೀಡಿ ತನ್ನೊಂದಿಗೆ ಬಂದಲ್ಲಿ ಇತರೆ ಆರೋಪಿತರೊಂದಿಗೆ ಸೇರಿಕೊಂಡು ಮೃತ ಸಂತೋಷನನ್ನು ಕೊಲೆ ಮಾಡಲು ಉಪಯೋಗಿಸಿದ ಸೊತ್ತುಗಳನ್ನು ಹಾಜರುಪಡಿಸುವುದಾಗಿ ಹೇಳಿ ಅದರಂತೆ ಆರೋಪಿ ನಮ್ಮನ್ನು

ಮತ್ತು ಪೋಲಿಸರನ್ನು ಸಂಜೆ 4-30 ಗಂಟೆಗೆ ಹಿರಿಯಡ್ಕ ಪೋಲಿಸ್ ಠಾಣೆಯಿಂದ ಇಲಾಖಾ ವಾಹನದಲ್ಲಿ ಉಡುಪಿ ಕಡೆಗೆ ಕರೆದುಕೊಂಡು ಹೋಗಿ 1 ಕಿ.ಮೀ ಹೋದಾಗ ಓಂತಿಬೆಟ್ಟು ಬಳಿ ಪೆರ್ಣಂಕಿಲ ಕಡೆಗೆ ತಿರುಗಿಸುವಂತೆ ಹೇಳಿ 8 ಕಿ.ಮೀ. ಕ್ರಮಿಸಿದಾಗ ಒಂದನೇ ಆರೋಪಿಯ ಮನೆಯ ಹತ್ತಿರ ವಾಹನವನ್ನು ನಿಲ್ಲಿಸಲು ಹೇಳಿ ಮುಂದಾಗಿ ಇಳಿದು ನಮ್ಮನ್ನು ಹಿಂಬಾಲಿಸುವಂತೆ ಹೇಳಿ ಒಂದನೇ ಆರೋಪಿಯ ಮನೆಯ ಎದುರಿನಿಂದ ಹೋಗಿ ನಿರ್ಮಾಣ ಹಂತದಲ್ಲಿರುವ ಕಟ್ಟಡದ ಬಳಿಗೆ ಕರೆದುಕೊಂಡು ಹೋಗಿ ಗೋಡೆಯ ಬದಿಯಲ್ಲಿ ಇಟ್ಟಿದ್ದ ಸೊತ್ತುಗಳನ್ನು ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಿದಾಗ ಕಬ್ಬಿಣದ ಪೈಪ್, ಚೂರಿ-1, ಕಬ್ಬಿಣದ ಮಚ್ಚು ಆಗಿದ್ದು ರಕ್ತದ ಕಲೆ ಕಂಡುಬಂದಿದ್ದು ಅದೇ ಸ್ಥಳದಲ್ಲಿ ಪ್ಲಾಸ್ಟಿಕ್ ತೊಟ್ಟೆಯಿಂದ ಮೂರು ಸರಪಳಿ ತೆಗೆದು ತೋರಿಸಿದ್ದು ಈ ಎಲ್ಲಾ ಸೊತ್ತುಗಳನ್ನು ಕೃತ್ಯಕ್ಕೆ ಬಳಸಿದ ಹತ್ಯಾರು ಎಂದು ತಿಳಿಸಿದ್ದು ಅವುಗಳನ್ನು ಪೋಲಿಸರು ನಮ್ಮ ಸಮಕ್ಷಮ ನಿಪಿ12 ರಂತೆ ಮಹಜರು ಮಾಡಿ ಅಮಾನತ್ತು ಪಡಿಸಿಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ ಅದೇ ಸಮಯ ನಿಪಿ 14 ಮತ್ತು 15 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸರಿಗೆ ಈಗ ಓದಿ ಹೇಳಿದಂತೆ ನಿಪಿ-16 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೇ ನನ್ನ ಸಹೋದರನನ್ನು ಕೊಲೆ ಮಾಡಿದ ವಿಚಾರ ತಿಳಿದಿದ್ದರೂ ಸಹಾ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ** ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.